ಮನೆ ಬಿಟ್ಟಾಗ ಇನ್ನೂ ಅಂಗಿಚೊಣ್ಣದ ಹುಡುಗ, ತೆಳ್ಳಗೆ ಇಷ್ಟುದ್ದಕ್ಕೆ... ಸೊಂಟದಿಂದ ಜಾರುವ ಚಡ್ಡಿಗೆ ಉಡುದಾರ ಬಿಗಿದುಕೊಂಡು, ಆಗಾಗ ಮೂಗಿನೊಳಗೆ ಬೆರಳಾಡಿಸಿಕೊಂಡು, ತಲೆ ತುರಿಸಿಕೊಂಡು ಇರುತ್ತಿದ್ದ ಅದೇ ಅವನು!

ಒಡನೇ ಅತ್ತೆ, ಅವನ ಅಸಹನೆ ಕಾವು ನನಗೆ ತಟ್ಟಿಬಿಡಬಹುದೇನೋ ಎಂಬಂತೆ ಲಗುಬಗೆಯಿಂದ ಮೂಗು ಸೀಟಿಕೊಂಡು 'ಬಾ ವಳ್ಗೆ' ಎಂದು ತ್ವರೆ ಮಾಡಿ ಜುಲುಮೆಯಿಂದ ತೋಳು ಹಿಡಿದೆಳೆದಳು. ಅಭ್ಯಾಸ ತಪ್ಪಿದ್ದ ಫಲಕ್ಕೆ ಅವಳ ಹಿಂದೆ ದಬ್ಬಿಸಿಕೊಂಡವನಂತೆ ಹೋದವನ ಹಣೆಗೆ ಹೆಬ್ಬಾಗಿಲ ಕಮಾನು ಬಡಿಯಿತು. 'ಓ... ನೋಡ್ಕಂದು ಬರದಲ್ವಾ, ಅಭ್ಯಾಸ ತಪ್ಪೋಗದೆ ಬುಡು' ಎಂದು ಸಣ್ಣಗೆ ನಕ್ಕಳಾದರೂ, ಅದು, ಅದೇ ಆಗಿನ್ನೂ ಅತ್ತ ಅವಳ ಕೆನ್ನೆಯ ಸುಕ್ಕನ್ನು ಮತ್ತಷ್ಟು ಆಳವಾಗಿ ಕಾಣಿಸಿತ್ತು. ಸಣ್ಣ ವಯಸ್ಸಿನಲ್ಲಿ ಹೊಳೆಹೊಳೆಯುತ್ತಿದ್ದ ಕಂಗಳಲ್ಲೀಗ ಕ್ಷೀಣ ಬೆಳಕಿತ್ತು. ಮನೆಯ ಒಳಗೂ ಹಾಗೆಯೇ, ಕ್ಷೀಣವಾದ ಬೆಳಕಿತ್ತು ಮತ್ತು ನೆತ್ತಿತೋಯಿಸುವ ಅಸಾಧಾರಣ ತಂಪಿತ್ತು. ಮನೆಯೊಳಗೆ ತುಂಬಿಕೊಂಡಿದ್ದ ಅದೇ ಚಿರಪರಿಚಿತ ಘಮ! ಆ ಘಮ ಒಂದೇ ಕ್ಷಣದಲ್ಲಿ ಅಪ್ಪ, ಅಮ್ಮ, ಸರಸ್ವತಿ ಮತ್ತು ಬಾಲ್ಯದ ನನ್ನನ್ನೂ ಸೇರಿಸಿದಂತೆ ಎಲ್ಲರನ್ನೂ ಅನಾಮತ್ತಾಗಿ ಎಳೆತಂದು ಕಣ್ಣೆದುರು ನಿಲ್ಲಿಸಿ ಮನಸನ್ನು ಮೂಕವಾಗಿಸಿತು. ಅಡುಗೆ ಮನೆಯೊಳಗೆ ಒಲೆ ಉರಿಯುತ್ತಿರುವುದು ಅದರ ಸದ್ದಿನಿಂದಲೂ ಪರಿಮಳದಿಂದಲೂ ಗೊತ್ತಾಯಿತು. ಒಳಗೆ ಅಟ್ಟುವ ಕೈಬಳೆಯ ಸದ್ದು ಹೊಸತಾಗಿತ್ತು ಆದರೂ ಅದು ಅವ್ವನನ್ನು ನೆನಪಿಸಿತು. ಅವಳ ಕೈಬಳೆಯ ಶಬ್ದ ಇನ್ನೂ ಎಷ್ಟೊಂದು ಚಿರಪರಿಚಿತವಾಗಿದೆ. ಅಡುಗೆಮನೆಯೊಳಗೆ ಅವ್ವನಿರಲಿ, ಅತ್ತೆಯಿರಲಿ ಅಥವಾ ಬೇರೆ ಯಾರೇ ಬಂದಿರಲಿ ನನಗೆ ಒಳಗಿರುವ ಅಷ್ಟೂ ಹೆಂಗಸರ ಕೈಬಳೆ ಸದ್ದಿನ ನಡುವೆ ಅವ್ವನ ಕೈಬಳೆ ಸದ್ದು ಗೊತ್ತಾಗುತ್ತಿತ್ತು. ಅವಳು ಮುದ್ದೆ ಕೋಲು ತಿರುಗಿಸುವ ಸದ್ದು ಗುರ್ತಾಗುತ್ತಿತ್ತು. ಮಕ್ಕಳನ್ನು ಮೀಯಿಸುವಾಗ ಅವಳು ಹೊರಡಿಸುವ ಇಸ್ಸ್ ಸ್ಸ್ ಶಬ್ದದಿಂದ ಬಚ್ಚಲು ಮನೆಯೊಳಗಿರುವುದು ಅವ್ವನೇ ಎಂದು ಗೊತ್ತಾಗುತ್ತಿತ್ತು. ಚಾನೆಲ್ಲಿಗೆ ಬಟ್ಟೆ ಒಗೆಯಲು ಹೋದರೆ, ಅಚ್ಚಿ, ಆಚ್ಚೆ... ಅಚ್ಚಿ... ಬಟ್ಟೆಗಳನ್ನು ಎತ್ತೆತ್ತಿ ಬಡಿಯುವಾಗ ಅವಳು ಮಾಡುತ್ತಿದ್ದ ಸದ್ದು! ಅದಲ್ಲದೆ ಬಟ್ಟೆ ಒಗೆದು ಒಣಗಲು ಹರವಿ ಹಾಕುತ್ತಿದ್ದಾಗ ಎಷ್ಟು ಶ್ರದ್ಧೆಯಿಂದ ಹಿಂಡಿ, ಒದರಿ ಎಷ್ಟು ಹರವಾಗಿ ಒಣಹಾಕುತ್ತಿದ್ದಳು! ಒಣಗಿದ ಬಟ್ಟೆಯನ್ನು ಯಾವ ಇಸ್ತ್ರಿಯ ಗೋಜಿಲ್ಲದೆ ಹಾಗೇ ಧರಿಸಬಹುದಿತ್ತು, ಒಂದು ಸುಕ್ಕು ಸಹಾ ಇರುತ್ತಿರಲಿಲ್ಲವಲ್ಲ!

ಎಂಥಾ ಚಂದನೆಯ ದಿನಗಳವು. ಅಮ್ಮ, ಅಪ್ಪ, ನಾನು, ತಾನು ವಿಧವೆಯಾದ ನಂತರ ಮಕ್ಕಳು ಸರಸ್ವತಿ ಮತ್ತು ದಿನೇಶರೊಂದಿಗೆ ನಮ್ಮಲ್ಲೇ ಬಂದು ಉಳಿದುಕೊಂಡಿದ್ದ ಅತ್ತೆ. ಅತ್ತೆ ಮತ್ತು ಅವ್ವನ ನಡುವೆ ಇದ್ದ ಅನ್ಯೋನ್ಯತೆ, ಮನೆಯವರೆಲ್ಲ ಸಮ್ಮತದೊಂದಿಗೆ ಪರಸ್ಪರ ಪ್ರೀತಿಸುತ್ತಿದ್ದ ನಾನು ಮತ್ತು ಸರಸ್ವತಿ, ಸ್ವಂತಮನೆ, ತೋಟ, ಬಯಲು, ಆಕಳು ಕರು, ಊರಿನಲ್ಲಿ ಎಲ್ಲರಿಂದಲೂ ಸಿಗುತ್ತಿದ್ದ ಗೌರವ! ಒಟ್ಟಾರೆ ಎಂಥಾ ನೆಮ್ಮದಿಯ ಬದುಕು! ಬದುಕಿನಲ್ಲಿ ಬೇರಿನ್ನೇನೋ ಬೇಕೆಂಬ ಸಣ್ಣ ಯೋಚನೆ ಕೂಡ ನಮಗಿರಲಿಲ್ಲ. ಅತ್ತೆಯ ಸ್ವಂತ ಖರ್ಚಿಗೆಂದು ದೇವಸ್ಥಾನದ ಬಳಿ ಹೂವು ಹಣ್ಣಿನ ಅಂಗಡಿ ತೆಗೆಸಿಕೊಟ್ಟಿದ್ದ ಅಪ್ಪ, ಅತ್ತೆಯನ್ನು ಎಷ್ಟು ಜತನದಿಂದ ನೋಡಿಕೊಳ್ಳುತ್ತಿದ್ದ! ಅವ್ವನೂ ಅಷ್ಟೇ! ಅವರಿಬ್ಬರೂ ಗೆಳತಿಯರಂತಿರುತ್ತಿದ್ದರು. ಇನ್ನು ಸರಸ್ವತಿ ಚೆಲುವೆಯರಲಿ ಚೆಲುವೆ. ಯಾವುದಕ್ಕೂ ಕೊರತೆಯೇ ಇಲ್ಲದಂತೆ ಇದ್ದ ಮನೆಯೊಳಗಿನ ಎಲ್ಲವೂ ಹೇಗೆ ಒಂದೇ ದಿನದಲ್ಲಿ ನೆಲಕಚ್ಚಿಬಿಟ್ಟಿತು!

ಮನೆಯಿಂದ ಹೊರಡುವಾಗ ನನಗೆ ಇದ್ದದ್ದು ಒಂದೇ ಯೋಚನೆ, ಹೇಗಾದರೂ ಇಲ್ಲಿಂದ ತಪ್ಪಿಸಿಕೊಂಡು ಓಡಬೇಕೆಂಬುವುದು ಮಾತ್ರವೇ. ಬಹುಶಃ ಹಾಗೆ ಓಡುವಾಗ ನನಗೆ ಇದ್ದದ್ದು ನನ್ನ ಬಗೆಗಿನ ಯೋಚನೆ ಮಾತ್ರವೇ. ಇಲ್ಲ ಇಲ್ಲ, ನನ್ನ ಬಗೆ ಕೂಡ ನಾನು ಯೋಚಿಸುತ್ತಿರಲಿಲ್ಲ. ನನ್ನನ್ನು ಏನೋ ಒಂದು ಅಟ್ಟಿಸಿಕೊಂಡು ಬರುತ್ತಿತ್ತು. ಅದು ಭಯ, ದಿಗಿಲು, ಅವಮಾನ, ಅಸಹಾಯಕತೆ, ರೋಷ, ದುಃಖ, ತಳಮಳ, ಗೊಂದಲಗಳ ಸಮ್ಮಿಳಿತ ಭಾವವಾಗಿತ್ತು. ಅದು ನನ್ನೊಳಗೆ ಆ ಕ್ಷಣದಲ್ಲಿ ಸೃಷ್ಟಿಸಿದ್ದ ಹೊಯ್ದಾಟಕ್ಕೆ ಅಲ್ಲಿಂದ ಎದ್ದು ಓಡದೆ ಬೇರೆ ದಾರಿಯಿರಲಿಲ್ಲ. ಯಾವುದೋ ಕಾಣದ ಊರಿನಲಿ ನನ್ನ ಪಾಲಿನ ಸಾಂತ್ವನವೊಂದು ಕೈತೆರೆದು ನಿಂತು